# ಉಪಾಸನಾ ಸ್ಥಳಗಳ (ವಿಶೇಷ ಉಪಬಂಧಗಳ) ಅಧಿನಿಯಮ, 1991

## (1991ರ ಸಂಖ್ಯೆ 42)

[18ನೇ ಸೆಪ್ಟೆಂಬರ್, 1991]

ಯಾವುದೇ ಉಪಾಸನಾ ಸ್ಥಳದ ಪರಿವರ್ತನೆಯನ್ನು ಪ್ರತಿಬಂಧಿಸುವ ಮತ್ತು ಯಾವುದೇ ಉಪಾಸನಾ ಸ್ಥಳವು 1947ರ ಆಗಸ್ಟ್ 15ನೇ ದಿನದಂದು ಅಸ್ತಿತ್ವದಲ್ಲಿದ್ದಂತೆ ಅದರ ಧಾರ್ಮಿಕ ಸ್ವರೂಪವನ್ನು ಉಳಿಸಿಕೊಂಡು ಬರುವ ಬಗ್ಗೆ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳ ಬಗ್ಗೆ ಉಪಬಂಧಿಸುವ ಅಧಿನಿಯಮ.

ಭಾರತ ಗಣರಾಜ್ಯದ ನಲವತ್ತೆರಡನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕುದು:-

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ:- (1) ಈ ಅಧಿನಿಯಮವನ್ನು ಉಪಾಸನಾ ಸ್ಥಳಗಳ (ವಿಶೇಷ ಉಪಬಂಧಗಳ) ಅಧಿನಿಯಮ, 1991 ಎಂದು ಕರೆಯತಕ್ಕುದು.

(2) ಇದು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) 3, 6 ಮತ್ತು 8ನೇ ಪ್ರಕರಣಗಳ ಉಪಬಂಧಗಳು ಕೂಡಲೇ ಜಾರಿಗೆ ಬರತಕ್ಕುದು ಮತ್ತು ಈ ಅಧಿನಿಯಮದ ಉಳಿದ ಉಪಬಂಧಗಳು 1991ರ ಜುಲೈ 11ನೇ ದಿನದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕುದು.

2. ಪರಿಭಾಷೆಗಳು:- ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಈ ಅಧಿನಿಯಮದ ಪ್ರಾರಂಭ " ಎಂದರೆ 1991ರ ಜುಲೈ 11ನೇ ದಿನದಂದು ಆಗಿರುವ ಈ ಅಧಿನಿಯಮದ ಪ್ರಾರಂಭ;

(ಬಿ) "ಪರಿವರ್ತನೆ" ಎಂಬುದು ಅದರ ವ್ಯಾಕರಣ ವ್ಯತ್ಯಾಸಗಳೊಂದಿಗೆ ಯಾವುದೇ ಸ್ವರೂಪದ ವ್ಯತ್ಯಾಸ ಅಥವಾ ಬದಲಾವಣೆಯನ್ನು ಒಳಗೊಳ್ಳುತ್ತದೆ;

(ಸಿ) "ಉಪಾಸನಾ ಸ್ಥಳ" ಎಂದರೆ ದೇವಾಲಯ, ಮಸೀದಿ, ಗುರುದ್ವಾರ, ಚರ್ಚು, ಸನ್ಯಾಸಿ ಮಠ ಅಥವಾ ಯಾವುದೇ ಹೆಸರಿನಿಂದ ಕರೆಯಲಾಗುವ, ಯಾವುದೇ ಧಾರ್ಮಿಕ ವರ್ಗದ ಅಥವಾ ಅದರ ಯಾವುದೇ ಪಂಗಡದ ಯಾವುದೇ ಇತರ ಸಾರ್ವಜನಿಕ ಉಪಾಸನಾ ಸ್ಥಳ;

3. ಉಪಾಸನಾ ಸ್ಥಳಗಳ ಪರಿವರ್ತನೆಯ ಪ್ರತಿಷೇಧ :- ಯಾವನೇ ವ್ಯಕ್ತಿಯು ಯಾವುದೇ ಧಾರ್ಮಿಕ ವರ್ಗದ ಅಥವಾ ಅದರ ಯಾವುದೇ ಪಂಗಡದ ಯಾವುದೇ ಉಪಾಸನಾ ಸ್ಥಳವನ್ನು, ಅದೇ ಧಾರ್ಮಿಕ ವರ್ಗದ ಬೇರೊಂದು ಪಂಗಡದ ಅಥವಾ ಬೇರೊಂದು ಧಾರ್ಮಿಕ ವರ್ಗದ ಅಥವಾ ಅದರ ಯಾವುದೇ ಪಂಗಡದ ಉಪಾಸನಾ ಸ್ಥಳವನ್ನಾಗಿ ಪರಿವರ್ತಿಸತಕ್ಕುದಲ್ಲ.

4. ಕೆಲವು ಉಪಾಸನಾ ಸ್ಥಳಗಳ ಧಾರ್ಮಿಕ ಸ್ವರೂಪದ ಬಗ್ಗೆ ಘೋಷಣೆ ಮತ್ತು ನ್ಯಾಯಾಲಯಗಳು ಮುಂತಾದವುಗಳ ಅಧಿಕಾರ ವ್ಯಾಪ್ತಿಗೆ ಪ್ರತಿಷೇಧ:- (1) 1947ರ ಆಗಸ್ಟ್ 15 ರಂದು ಅಸ್ತಿತ್ವದಲ್ಲಿದ್ದ ಉಪಾಸನಾ ಸ್ಥಳದ ಧಾರ್ಮಿಕ ಸ್ವರೂಪವು, ಆ ದಿನದಂದು ಅಸ್ತಿತ್ವದಲ್ಲಿದ್ದಂತೆಯೇ ಮುಂದುವರೆಯತಕ್ಕುದೆಂದು ಈ ಮೂಲಕ ಘೋಷಿಸಲಾಗಿದೆ.

(2) 1947ರ ಆಗಸ್ಟ್ 15 ರಂದು ಅಸ್ತಿತ್ವದಲ್ಲಿದ್ದ ಯಾವುದೇ ಉಪಾಸನಾ ಸ್ಥಳದ ಧಾರ್ಮಿಕ ಸ್ವರೂಪದ ಪರಿವರ್ತನೆಗೆ ಸಂಬಂಧಿಸಿದಂತೆ ಯಾವುದೇ ದಾವೆ, ಅಪೀಲು ಅಥವಾ ಇತರ ವ್ಯವಹರಣೆಯು ಈ ಅಧಿನಿಯಮದ ಪ್ರಾರಂಭದಂದು, ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಇತರ ಪ್ರಾಧಿಕಾರದ ಮುಂದೆ ಇತ್ಯರ್ಥದಲ್ಲಿದ್ದರೆ ಅದು ಕೊನೆಗೊಳ್ಳತಕ್ಕುದು, ಮತ್ತು ಅಂಥ ಯಾವುದೇ ವಿಷಯಕ್ಕೆ ಸಂಬಂಧಿಸಿದ ಯಾವುದೇ ದಾವೆ, ಅಪೀಲು ಅಥವಾ ಇತರ ವ್ಯವಹರಣೆಯನ್ನು ಅಂಥ ಪ್ರಾರಂಭದಂದು ಅಥವಾ ಆ ತರುವಾಯ ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಇತರ ಪ್ರಾಧಿಕಾರದಲ್ಲಿ ಹೂಡಲು ಅವಕಾಶವಿರತಕ್ಕುದಲ್ಲ:

ಪರಂತು, 1947ರ ಆಗಸ್ಟ್ 15ನೇ ದಿನದ ತರುವಾಯ ಅಂಥ ಯಾವುದೇ ಸ್ಥಳದ ಧಾರ್ಮಿಕ ಸ್ವರೂಪದಲ್ಲಿ ಯಾವುದೇ ಪರಿವರ್ತನೆಯು ಆಗಿದೆ ಎಂಬ ಆಧಾರದ ಮೇಲೆ ಹೂಡಲಾದ ಅಥವಾ ದಾಖಲ್ಮಾಡಲಾದ ಯಾವುದೇ ದಾವೆ, ಅಪೀಲು ಅಥವಾ ಇತರ ವ್ಯವಹರಣೆಯು ಈ ಅಧಿನಿಯಮದ ಪ್ರಾರಂಭದಂದು ಇತ್ಯರ್ಥದಲ್ಲಿದ್ದರೆ, ಅಂಥ ದಾವೆ, ಅಪೀಲು ಅಥವಾ ಇತರ ವ್ಯವಹರಣೆಯು ಹಾಗೆ ಕೊನೆಗೊಳ್ಳತಕ್ಕುದಲ್ಲ ಮತ್ತು ಅಂಥ ಪ್ರತಿಯೊಂದು ದಾವೆ, ಅಪೀಲು ಅಥವಾ ಇತರ ವ್ಯವಹರಣೆಯನ್ನು (1)ನೇ ಉಪಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ವಿಲೆ ಮಾಡತಕ್ಕುದು.

(3) (1)ನೇ ಉಪಪ್ರಕರಣದಲ್ಲಿ ಮತ್ತು (2)ನೇ ಉಪಪ್ರಕರಣದಲ್ಲಿ ಅಡಕವಾಗಿರುವುದು ಯಾವುದೂ,-

(ಎ) ಪ್ರಾಚೀನ ಸ್ಮಾರಕಗಳು ಮತ್ತು ಪುರಾವಸ್ತು ಸ್ಥಳಗಳ ಮತ್ತು ಅವಶೇಷಗಳ ಅಧಿನಿಯಮ, 1958 (1958ರ 24) ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ವ್ಯಾಪ್ತಿಗೊಳಪಡುವ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕ ಅಥವಾ ಪುರಾವಸ್ತು ಸ್ಥಳ ಅಥವಾ ಅವಶೇಷವಾಗಿರುವಂಥ, ಸದರಿ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ಉಪಾಸನಾ ಸ್ಥಳ;

(ಬಿ) (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ವಿಷಯಕ್ಕೆ ಸಂಬಂಧಿಸಿದ ಮತ್ತು ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಒಂದು ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಇತರ ಪ್ರಾಧಿಕಾರವು ಅಂತಿಮವಾಗಿ ತೀರ್ಮಾನಿಸಿದ, ಇತ್ಯರ್ಥಗೊಳಿಸಿದ ಅಥವಾ ವಿಲೆ ಮಾಡಿದ ಯಾವುದೇ ದಾವೆ, ಅಪೀಲು ಅಥವಾ ಇತರ ವ್ಯವಹರಣೆ;

(ಸಿ) ಯಾವುದೇ ಅಂಥ ವಿಷಯಕ್ಕೆ ಸಂಬಂಧಿಸಿದ ಮತ್ತು ಪಕ್ಷಕಾರರು ಅಂಥ ಪ್ರಾರಂಭಕ್ಕೆ ಮುಂಚೆ ತಮ್ಮೊಳಗೇ ಇತ್ಯರ್ಥ ಮಾಡಿಕೊಂಡಂಥ ಯಾವುದೇ ವಿವಾದ;

(ಡಿ) ಮೌನ ಸಮ್ಮತಿಯ ಮೂಲಕ ಅಂಥ ಪ್ರಾರಂಭಕ್ಕೆ ಮುಂಚೆ ಮಾಡಲಾದ ಅಂಥ ಸ್ಥಳದ ಯಾವುದೇ ಪರಿವರ್ತನೆ;

(ಇ) ಅಂಥ ಪ್ರಾರಂಭಕ್ಕೆ ಮುಂಚೆ ಮಾಡಲಾದ ಯಾವುದೇ ಅಂಥ ಸ್ಥಳದ ಯಾವ ಪರಿವರ್ತನೆಯನ್ನು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ, ಅದು ಕಾಲ ಪರಿಮಿತಿಯಿಂದ ಪ್ರತಿಷೇಧಿತವಾಗಿರುವ ಕಾರಣ ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಇತರ ಪ್ರಾಧಿಕಾರದಲ್ಲಿ ಪ್ರಶ್ನಿಸಲು ಆಗದೋ ಆ ಯಾವುದೇ ಪರಿವರ್ತನೆ

- ಇವುಗಳಿಗೆ ಅನ್ವಯವಾಗತಕ್ಕುದಲ್ಲ.

5. ಈ ಅಧಿನಿಯಮವು ರಾಮಜನ್ಮಭೂಮಿ - ಬಾಬರಿ ಮಸೀದಿಗೆ ಅನ್ವಯಿಸದಿರುವುದು:- ಈ ಅಧಿನಿಯಮದಲ್ಲಿ ಇರುವುದು ಯಾವುದೂ, ಉತ್ತರ ಪ್ರದೇಶ ರಾಜ್ಯದ ಅಯೋಧ್ಯೆಯಲ್ಲಿರುವ ರಾಮ ಜನ್ಮಭೂಮಿ-ಬಾಬರಿ ಮಸೀದಿಯೆಂದು ಸಾಮಾನ್ಯವಾಗಿ ತಿಳಿಯಲಾದ ಸ್ಥಳ ಅಥವಾ ಉಪಾಸನಾ ಸ್ಥಳಕ್ಕೆ ಮತ್ತು ಸದರಿ ಸ್ಥಳ ಅಥವಾ ಉಪಾಸನಾ ಸ್ಥಳಕ್ಕೆ ಸಂಬಂಧಿಸಿದ ಯಾವುದೇ ದಾವೆ, ಅಪೀಲು ಅಥವಾ ಇತರ ವ್ಯವಹರಣೆಗೆ ಅನ್ವಯವಾಗತಕ್ಕುದಲ್ಲ.

6. 3ನೇ ಪ್ರಕರಣದ ಉಲ್ಲಂಘನೆಗಾಗಿ ದಂಡನೆ:- (1) 3ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ಆಗಲಿ, ಮೂರು ವರ್ಷಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ದಂಡನೀಯರಾಗತಕ್ಕುದು ಮತ್ತು ಜುಲ್ಮಾನೆಗೂ ಗುರಿಯಾಗತಕ್ಕುದು.

(2) (1)ನೇ ಉಪಪ್ರಕರಣದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧ ಮಾಡಲು ಪ್ರಯತ್ನಿಸುವ ಅಥವಾ ಅಪರಾಧ ನಡೆಸಲು ಕಾರಣನಾಗುವ ಮತ್ತು ಅಂಥ ಪ್ರಯತ್ನದಲ್ಲಿ ಆ ಅಪರಾಧವನ್ನು ಮಾಡುವ ಬಗ್ಗೆ ಯಾವುದೇ ಕೃತ್ಯವನ್ನು ಮಾಡುವ ಯಾರೇ ಆಗಲಿ ಆ ಅಪರಾಧಕ್ಕಾಗಿ ಉಪಬಂಧಿಸಿದ ದಂಡನೆಯಿಂದ ದಂಡನೀಯರಾಗತಕ್ಕುದು.

(3) (1)ನೇ ಉಪಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವನ್ನು ಮಾಡಲು ದುಷ್ಪ್ರೇರಿಸುವ, ಅಥವಾ ಅದನ್ನು ಮಾಡುವುದಕ್ಕೆ ಆಪರಾಧಿಕ ಒಳಸಂಚಿನ ಪಕ್ಷಕಾರನಾಗಿರುವ ಯಾರೇ ಆಗಲಿ, ಅಂಥ ಅಪರಾಧವು ಅಂಥ ದುಷ್ಪ್ರೇರಣೆಯ ಪರಿಣಾಮವಾಗಿ ಅಥವಾ ಅಂಥ ಆಪರಾಧಿಕ ಒಳಸಂಚಿಗೆ ಅನುಸಾರವಾಗಿ ನಡೆದಿರಲಿ ಅಥವಾ ನಡೆಯದಿರಲಿ ಮತ್ತು ಭಾರತ ದಂಡ ಸಂಹಿತೆಯ (1860ರ 45) 116ನೇ ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಆ ಅಪರಾಧಕ್ಕಾಗಿ ಉಪಬಂಧಿಸಲಾದ ದಂಡನೆಯಿಂದ ದಂಡನೀಯನಾಗತಕ್ಕುದು.

7. ಈ ಅಧಿನಿಯಮವು ಇತರ ಅಧಿನಿಯಮಿತಿಗಳನ್ನು ಅಧ್ಯಾರೋಹಿಸುವುದು:- ಈ ಅಧಿನಿಯಮದ ಉಪಬಂಧಗಳು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅಥವಾ ಈ ಅಧಿನಿಯಮವನ್ನು ಹೊರತುಪಡಿಸಿ ಯಾವುದೇ ಇತರ ಕಾನೂನಿನ ಕಾರಣದಿಂದ ಪರಿಣಾಮ ಹೊಂದಿರುವ ಯಾವುದೇ ಲಿಖಿತದಲ್ಲಿ ಈ ಅಧಿನಿಯಮಕ್ಕೆ ಅಸಂಗತವಾದುದು ಏನೇ ಅಡಕವಾಗಿದ್ದಾಗ್ಯೂ, ಪರಿಣಾಮಕಾರಿಯಾಗಿರತಕ್ಕುದು.

8. 1951ರ ಅಧಿನಿಯಮ ಸಂಖ್ಯೆ 43ರ ತಿದ್ದುಪಡಿ:- ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ 8ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ,-

(ಎ) (ಐ) ಖಂಡದಲ್ಲಿ "ಅಥವಾ" ಎಂಬ ಪದವನ್ನು ಕೊನೆಯಲ್ಲಿ ಸೇರಿಸತಕ್ಕುದು;

(ಬಿ) ಹಾಗೆ ತಿದ್ದುಪಡಿ ಮಾಡಲಾದ (ಐ) ಖಂಡದ ತರುವಾಯ, ಈ ಕೆಳಕಂಡ ಖಂಡವನ್ನು ಸೇರಿಸತಕ್ಕುದು, ಎಂದರೆ:-

"(ಜೆ) ಉಪಾಸನಾ ಸ್ಥಳಗಳ (ವಿಶೇಷ ಉಪಬಂಧಗಳ) ಅಧಿನಿಯಮ, 1991ರ 6ನೇ ಪ್ರಕರಣ (ಉಪಾಸನಾ ಸ್ಥಳದ ಪರಿವರ್ತನೆಯ ಅಪರಾಧ)".

* * * * *

ಮುದ್ರಕರು : ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಸರ್ಕಾರಿ ಮುದ್ರಣಾಲಯ, ಬೆಂಗಳೂರು - ಕಾ.ಸೂ.719 / ಎಲ್‌ಎ- ಪಿ9